Original Article
ISSN (Online): 2582-7472

ShodhKosh: Journal of Visual and Performing Arts
January 2024 5(1), 1533–1539

# THE FEELING OF GENDER DISABILITY IN SIDDHARAMA'S REAL VACHANAS

# ಸಿದ್ಧರಾಮನನಿಜವಚನಗಳಲ್ಲಿ ಲಿಂಗ ವಿಕಳಾವಸ್ಥೆಯ ಭಾವ

Kumar Belale [1], K. Chandrakath [1]

[1] Government College for Women (Autonomous), Mandya- 571401

**DOI**
10.29121/shodhkosh.v5.i1.2024.3597

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

OPEN ACCESS

## ABSTRACT

In the twelfth century, the Shiva Sharanas led their ideal married life and became guides for the future. The feeling of "Sharanas Sati Linga Pati" has been observed among the Veerashaiva devotees since the beginning. The vachana literature stands as a witness to this. The fact that they moved from worldly roles to spirituality is a fact that is evident from the life of the sharanas. They are examples of those who eat and fast and are celibate even after marriage. Siddharama, who is a very prominent Shiva Sharanas, has also mentioned this issue.

*ಹನ್ನೆರಡನೆಯ ಶತಮಾನದಲ್ಲಿ ಶಿವಶರಣ ಶರಣೆಯರು ತಮ್ಮ ಆದರ್ಶ ದಾಂಪತ್ಯ ಜೀವನವನ್ನು ನಡೆಸಿ ತಾವು ತಮ್ಮ ತಮ್ಮ ಆರಾಧ್ಯ ದೈವವನ್ನು ದರ್ಶಿಸಿ ಮುಂದಿನವರಿಗೆ ಮಾರ್ಗದರ್ಶಿಗಳಾಗಿದ್ದಾರೆ. ವೀರಶೈವ ಭಕ್ತರಲ್ಲಿ "ಶರಣ ಸತಿ ಲಿಂಗ ಪತಿ' ಭಾವ ಮೊದಲಿನಿಂದಲೂ ಆಚರಣೆಯಲ್ಲಿದ್ದುದು ಕಂಡು ಬರುತ್ತದೆ. ವಚನ ಸಾಹಿತ್ಯ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಲೌಖಿಕ ಭೂಮಿಕೆಯಿಂದ ಅಧ್ಯಾತ್ಮಿಕತೆಯ ಕಡೆಗೆ ಒಲಿದಿರುವುದು ಶರಣರ ಜೀವನದಿಂದ ತಿಳಿದು ಬರುವ ಅಂಶ. ಅವರು ಉಂಡು ಉಪವಾಸಿಗಳು, ಮದುವೆಯಾಗಿಯೂ ಬ್ರಹ್ಮಚಾರಿಗಳು ಎಂಬ ಮಾತಿಗೆ ಉದಾಹರಣೆಯಾಗಿ ನಮ್ಮ ಮುಂದೆ ಇದ್ದಾರೆ. ಶಿವಶರಣರಲ್ಲಿ ಬಹು ಪ್ರಮುಖರಾದ ಸಿದ್ಧರಾಮರು ಸಹ ಈ ವಿಷಯದ ಬಗೆಗೆ ಪ್ರಸ್ತಾಪಿಸಿದ್ದಾರೆ.*

## 1. INTRODUCTION

ಹನ್ನೆರಡನೆಯ ಶತಮಾನದಲ್ಲಿ ಶಿವಶರಣ ಶರಣೆಯರು ತಮ್ಮ ಆದರ್ಶ ದಾಂಪತ್ಯ ಜೀವನವನ್ನು ನಡೆಸಿ ತಾವು ತಮ್ಮ ತಮ್ಮ ಆರಾಧ್ಯ ದೈವವನ್ನು ದರ್ಶಿಸಿ ಮುಂದಿನವರಿಗೆ ಮಾರ್ಗದರ್ಶಿಗಳಾಗಿದ್ದಾರೆ. ವೀರಶೈವ ಭಕ್ತರಲ್ಲಿ "ಶರಣ ಸತಿ ಲಿಂಗ ಪತಿ' ಭಾವ ಮೊದಲಿನಿಂದಲೂ ಆಚರಣೆಯಲ್ಲಿದ್ದುದು ಕಂಡು ಬರುತ್ತದೆ. ವಚನ ಸಾಹಿತ್ಯ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಲೌಖಿಕ ಭೂಮಿಕೆಯಿಂದ ಅಧ್ಯಾತ್ಮಿಕತೆಯ ಕಡೆಗೆ ಒಲಿದಿರುವುದು ಶರಣರ ಜೀವನದಿಂದ ತಿಳಿದು ಬರುವ ಅಂಶ. ಅವರು ಉಂಡು ಉಪವಾಸಿಗಳು, ಮದುವೆಯಾಗಿಯೂ ಬ್ರಹ್ಮಚಾರಿಗಳು ಎಂಬ ಮಾತಿಗೆ ಉದಾಹರಣೆಯಾಗಿ ನಮ್ಮ ಮುಂದೆ ಇದ್ದಾರೆ. ಶಿವಶರಣರಲ್ಲಿ ಬಹು ಪ್ರಮುಖರಾದ ಸಿದ್ಧರಾಮರು ಸಹ ಈ ವಿಷಯದ ಬಗೆಗೆ ಪ್ರಸ್ತಾಪಿಸಿದ್ದಾರೆ.

ಸತಿ-ಪತಿ ಭಾವದ ವಚನಗಳುಸಿದ್ದರಾಮನಲ್ಲಿ ವಿಶೇಷವಾಗಿವೆ. ಸಿದ್ದರಾಮ ತನ್ನನ್ನು ಹೆಣ್ಣಾಗಿಯೂ ಕಪಿಲಸಿದ್ಧಮಲ್ಲಿಕಾರ್ಜುನನ್ನು ಗಂಡಾಗಿಯೂ ಪರಿಭಾವಿಸಿ ನಡೆಸುವ ಭಕ್ತಿರತಿ ಗಜೇಶ ಮಸಣಯ್ಯ, ಉರಿಲಿಂಗದೇವರನ್ನು ನೆನಪಿಗೆ ತರುತ್ತದೆ. ಹೆಣ್ಣಿನ ಮನದ ವಿರಹ ವೇದನೆಯನ್ನು ನಲ್ಲನÀ ಆಗಮನದ ಕಾತರತೆಯನ್ನು ನಲ್ಲನು ಕಾಣಿಸಿಕೊಂಡಾಗಿನ ಮನದ ಸಂಭ್ರಮವನ್ನು ಒಬ್ಬರು ಇನ್ನೊಬ್ಬರಲ್ಲಿ ಲಯವಾಗುವ ಏಕೀಭಾವವನ್ನು ಅಷ್ಟು ನವಿರಾಗಿ ಮಾತಿನಲ್ಲಿ ಮೂಡಿಸಿರುವುದು ಮೆಚ್ಚುವಂತಹ.

"ಮಚ್ಚಿದೆ ಮಚ್ಚಿದೆ ನಲ್ಲನೆ ಅಯ್ಯ! ನಿನ್ನ ಮಚ್ಚಿ ನಾ ಅಗಲಲಾರೆ
ಮಚ್ಚಿದಾ ಮನಕೆ ಇನ್ನು ಮಂಗಳವನೀಯಯ್ಯ!
ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯ!"

"ಸಜ್ಜನನೆ ಎನ್ನ ಗಂಡನೆ ನೀನು! ಮತ್ತನ್ಯಕ್ಕೆಳಸಲಾಪೆನೆ! ಅಯ್ಯ!
ಕಾಮ ಕ್ರೋಧ ಲೋಭ ಮೋಹವು ಅಯ್ಯ!
ಎನ್ನ ಆಮಿಸವಿಕಾರಂಗಳು ಆನಂದವಾಗಿ
ತಮ್ಮ ಪ್ರಭೆಯನೆಯ್ದುದ ಮುನ್ನ
ನಿನ್ನ ರೂಪನೀಯ್ಯಯ್ಯ! ಕಪಿಲಸಿದ್ಧ ಮಲ್ಲಿನಾಥಯ್ಯ!"

"ಅಯ್ಯ! ನಿಮ್ಮ ವಿಕಳದಲ್ಲಿ
ನೆಳಲು ಗಾಳಿಯ ಸರವೆ ನೀವೆಂದು ಬಗೆದೆ ಕಂಡಯ್ಯ!
ಕಪಿಲಸಿದ್ಧ ಮಲ್ಲಿನಾಥಯ್ಯ! ನಿಮ್ಮ ವಿಕಳದಲ್ಲಿ
ಮಹಾ ಭ್ರಾಂತಳಾಗಿದ್ದೆನಯ್ಯ!"

"ಪ್ರಾಪಿತವೇಕೆ ಬಾರದಯ್ಯ ಇಂದಿನ ಅವಸ್ಥೆಗೆ!
ಕಲ್ಪಿತವೇಕೆ ಬಾರದಯ್ಯ ಇಂದಿನ ಅವಸ್ಥೆಗೆ!
ಲಿಕ್ತವೇಕೆಬಾರದಯ್ಯ ಇಂದಿನ ಅವಸ್ಥೆಗೆ!
ಇಂದಿನಿತು ಏಕೆ ಬಾರದು! ನಾನೇನ ಮಾಡುವೇನು ದೇವ!
ಅಯ್ಯ! ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯ!
ನಿನಗೆ ಕೂಪ ಅವಸ್ಥೆಯಲ್ಲಿ ಪ್ರಾಣ ಬಿಡದು ಲಿಕ್ತ ಬಾರದು
ಎನ್ನನಿಂತಿರಿಸುವರೆ! ಹೇಳಲೆ ದೇವಯ್ಯ!"

ಸಿದ್ಧರಾಮರು ವಿಕಳಾವಸ್ಥೆಯಲ್ಲಿ ಬೇಗುದಿಗೊಳ್ಳುವ ಶರಣ ಸತಿ ವಿರಹದ ಜ್ವಾಲೆಯಿಂದ ಪರಿತಪಿಸುವ ಕರುಣಾಮಯ ದೃಶ್ಯವನ್ನು ಈ ವಚನದಲ್ಲಿ ಚಿತ್ರಿಸಿದ್ದಾರೆ. ಲಿಂಗಪತಿಯನ್ನು ಕುರಿತು ತನ್ನ ಪ್ರಜೆ, ಆರಾಧನೆ ಪ್ರಾರ್ಥನೆಗೆ ನೀನು ಮಚ್ಚಿ ಒಲಿದು ನನ್ನ ಬಳಿಗೆ ಏಕೆ ಓಡೋಡಿ ಬಂದು ನನ್ನನ್ನು ಸಮಾಧಾನಪಡಿಸುವ ನಾಲ್ಕು ಒಳ್ಳೆಯ ಮಾತುಗಳನ್ನು ಆಡಿ ಸಂತೈಸುತ್ತಿಲ್ಲ. ಏಕೆ ನೀನು ನಿನ್ನ ಒಲವಿನ ಮಾತುಗಳಿಂದ ಕೂಡಿದ ಭರವಸೆಯ

ಪತ್ರವನ್ನು ಸಹ ಕಳುಹಿಸಿಕೊಡುತ್ತಿಲ್ಲ ಏಕೆ ತಡ ಮಾಡುತ್ತೀಯ. ಹೇಳು ದೇವ. ನಿನ್ನ ಒಡಗೂಡುವ ಸಮರಸದ ಸುಖವು ಅಗ್ನಿ ಕುಂಡಕ್ಕೆ ತಳ್ಳಿ ನೀನು ಮಾತ್ರ ಸುಮ್ಮನೆ ಹಾಯಾಗಿ ಏನೂ ತಿಳಿಯದವನಮತೆ ಮೌನಗೊಂಡಿದ್ದೀಯ. ಇನ್ನೆಂದಿAಗೆ ನನ್ನ ಈ ತಾಪ ಕೊನೆಗೊಳ್ಳುವುದು! ನನ್ನ ತಪ್ಪೇನು! ನನ್ನ ತನುಮನಧನವನೆಲ್ಲ ನಿನಗೆ ಅರ್ಪಿಸಿದ್ದೇನೆ. ನಾನೇನು ಮಾಡಲಿ! ನಿನ್ನನ್ನು ಒಲಿದುದಿದಕ್ಕೆ ನೀನು ಕೊಡುವ ಉಡುಗೊರೆ ಇದೆಯಾ! ನಿನ್ನ ನೆನಪಿನಲಿ ನನ್ನ ಹೃದಯ ಬೆಂದು ಬೆಂಡಾಗಿದೆ. ನನ್ನ ಪ್ರಾಣವನ್ನು ಫಣವನ್ನಾಗಿ ಇಟ್ಟಿದ್ದೇನೆ. ಪ್ರಾಣವಾದರೂ ಹೋಗಬಾರದೆ! ಸಂಗಸಮರಸ ಸುಖವಾದರೂ ಬಾರದೆ! ಹೀಗೆ ಎರಡೂ ಇಲ್ಲದೆ ಉಭಯ ಸಂಟಕದಲ್ಲಿ ಸಿಲುಕಿದ್ದೇನೆ. ದೇವಾ! ಎಂಬ ಶರಣ ಸತಿಯ ಅಸಹಾಯಕ ಸ್ಥಿತಿಯನ್ನು ಸಿದ್ಧರಾಮೇಶ್ವರರು ಈ ವಚನದಲ್ಲಿ ಚಿತ್ರಿಸಿದ್ದಾರೆ.

"ಕಂಡಲ್ಲಿ ಕರಯಾಮಯ! ನಿಂದಲ್ಲಿ ನಿರಾಮಯ
ಇವಗೆ ಕೂರ್ತು ವಿಕಳಾವಸ್ಥೆಗೊಂಡೆನವ್ವ!
ಮತ್ತೆ ಮುಂದೆ ನಿಂದವರ ಸಾರೆಂಬೆನು ಹಿಂದುಗಳೆವೆನು!
ಮುAದಕ್ಕೆ ಸಾರಿದವನ ನೋಡುತ್ತಿದ್ದೆನವ್ವ!
ಕಂಡವರ ಸಾರೆಂಬೆ, ನಿಂದ ಬಯಲ ನೆರವೆ
ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯನವ್ವ||"

"ಮತ್ತೆ ಹೋದೆನೆನಲು ಬೇಡ! ನೇಹಮೋಹದೆಡೆಗಳಲ್ಲಿ
ಕರೆಯಲಿಕೆ ಬಪ್ಪೆನು ಕಂಡಯ್ಯ!
ಎಲೆಯಯ್ಯ! ಎಲೆಯಯ್ಯ! ಒಮ್ಮೆ ತೋರಿರೊ!
ಆನು ಬಡಮನದವಳು! ನಿಮ್ಮ ಬೇಗ ಕೂಡಿ ನೆರೆದೇನೆಂಬೆ!
ಕಪಿಲಸಿದ್ಧ ಮಲ್ಲೇಶ್ವರ! ದೇವರದೇವ!"

"ಲೋಖದ ಗಂಡದ ಮಹಾತ್ಮೆಯ ಹೆಂಡಿರವರಿವರೆ! ಹಾ! ಹಾ! ಅಯ್ಯ!
ಶರೀರದೊಳಗೆ ಸಂದು ನಿಮ್ಮ ಸಂತುಗಾಣಲಾರದಾದನು
ಬೇಟಗೊAಡು ನಿಮ್ಮನೆ ಬೇಡುವೆನಯ್ಯ"

ಅಯ್ಯಾ! ಎನ್ನನೆನಿಸು ಭವ ಬರಿಸಿದಡೆ ನೀನೆ ಗಂಡ
ನಾನೆ ಹೆಂಡತಿ! ಕಪಿಲಸಿದ್ಧ ಮಲ್ಲೇಶ್ವರ! ದೇವರ ದೇವಯ್ಯ!
"ಅಯ್ಯ! ಎನ್ನ ನಾ ಸಂತೈಸಿ ಸಂತೈಸಲಾರೆನು
ಆಹಾ! ಅಯ್ಯ ಎನ್ನ ನಿನ್ನ ಕೂಟದ ಸವಿಗಳ ನೆನನೆನದು
ಬೇಯದ ಬೆಗೆಯ ಬೆಂದೆನಯ್ಯ!
ಅಯ್ಯ! ಎನಗಂತಿAತೆAದು ಹೇಳುವನಲ್ಲ!

ಮರೆಗೆ ಮರೆಯದ ಕಿಚ್ಚನಿಕ್ಕ ಹೋದೆಯಲ್ಲ!

ಎನ್ನ ಕಪಿಲಸಿದ್ಧ ಮಲ್ಲೇಶ್ವರಯ್ಯ!"

"ಕೆಳದಿ ಕೇಳಾ ಎನ್ನ; ನಾನಿದ್ದ ಪರಿಗಳ ಹೇಳುವೆ ನಿನಗೆ!

ಶಿಲೆಗಳ ಮೇಲೆ ಸ್ವೈವೆರಗಾಗಿ, ತಲೆಗಳ ಬಿಟ್ಟು ಇದ್ದ ಪರಿಯ,

ವಾಯು ಭಿಕ್ಷÄವಾಗಿ ಇದ್ದ ಪರಿಗಳ ನೋಡಿರವ್ವ!

ಆನಿದ್ದ ಗತಿಗಳ ಕಂಡು ಕೂಡಿ ಕರುಣಿಸಿ ಕರುಣಿಸಿ

ಗಂಡನಾದ ಎನ್ನ ಕಪಿಲಸಿದ್ಧ ಮಲ್ಲಿನಾಥ! ದೇವರ ದೇವ ನೋಡವ್ವ!"

ಈ ವಚನದಲ್ಲಿ ಶರಣಸತಿಯ ಲಿಂಗಪತಿಯ ವಿರಹದ ದುಃಖದಲ್ಲಿ ಮುಳುಗಿ, ಸುಪ್ಪತ್ತಿಗೆ ಹಾಸನ್ನು ತ್ಯಜಿಸಿ ಶಿಲೆಯ ಮೇಲೆ ಮಲಗಿ, ಸ್ನಾನಾದಿಗಳನ್ನು, ಕೇಶಾಲಂಕಾರಗಳನ್ನು ತ್ಯಜಿಸಿ, ಬೇಸರ ವ್ಯಥೆಯಿಂದ ನಿಟ್ಟುಸಿರು ಬಿಡುತ್ತಾ, ಆಹಾರ ನಿದ್ರಾದಿಗಳನ್ನು ಲೆಕ್ಕಿಸದೆ, ಕೇವಲ ವಾಯು ಭಕ್ಷಕಗಳಾಗಿ ಇದ್ದ ಪರಿಸ್ಥಿತಿಯನ್ನು ಕಂಡು, ಆ ಲಿಂಗದೇವರು ಕರುಣಿಸಿ, ನನ್ನ ಕೈಹಿಡಿದು ಗಂಡನಾದನವ್ವ! ದೇವರ ದೇವನಾದ ಕಪಿಲಸಿದ್ಧ ಮಲ್ಲಿನಾಥ ಎಂದು ಸಮಧಾನದ ಮಾತನ್ನು ಹೇಳಿದ್ದಾರೆ.

"ಬಾರದಾ ಗಂಡ ತಾ ಬಡವಾದ! ಬಡವಾದ!

ಉಣ್ಣದಾ ಗಂಡ ಉಪವಾಸವಿರ್ದ!

ಶ್ರೀ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಯ್ಯ

ನಿನ್ನ ತಾಗಲೊ ಎನ್ನ! ಕಣ್ಣ ನೀರು!"

"ಎನ್ನ ತನು ಕರಗಿ ಮನ ಕೊರಗಿದ ದುಃಖವಿದಾರದಯ್ಯ!

ಅಯ್ಯ! ಅಯ್ಯು! ಎಂದು ಅಳುವ ಅಕ್ಕೆ ಇದಾರದಯ್ಯ!

ಮರಹೆಂಬ ಕೊರಸಿಗೆ ಗುರಿಮಾಡಿದವರಾರಯ್ಯ!

ಹಾ! ಹಾ! ಎಂಬ ಧ್ವನಿಯ ಕೇಳಲಾರದೆ ಕಂಡು

ಕರುಣದಿAದ ಶರವ ಹಿಡಿದೆತ್ತಿ ಎನ್ನ ಕಣ್ಣ ನೀರ

ತೊಡವನು ಕಪಿಲಸಿದ್ಧ ಮಲ್ಲಿನಾಥಯ್ಯನು||"

ಲೋಕಾಲೋಕಗಳ ಅನುಭವವು ಈ ವಚನದಲ್ಲಿ ಗಟ್ಟಿಗೊಂಡಿದೆ. ಎನ್ನ ತನು ಕರಗಿ, ಮನ ಕರಗಿದ ದುಃಖವಿದಾರದಯ್ಯ! ಅಯ್ಯ! ಎಂದಳುವ ಅಕ್ಕೆ ಇದಾರದಯ್ಯ! ಈ ವಿಪರೀತ ದುಃಖಕ್ಕೆ ಕಾರಣರಾರು! ನೀನೆ ಅಲ್ಲವೆ, ನಿನ್ನಿಂದಲೇ ಈ ದುಃಖವನ್ನು ಅನುಭವಿಸುವಂತಾಗಿದೆ.

ಹೀಗೆ ತನು ಕರಗಿ ಮನಕೊರಗಿ ಸಹಿಸಲುಸಾಧ್ಯವಾದ ದುಃಖದಿಂದ ಬಳಲಿ ಬೆಂಡಾದಾಗ ಕಲ್ಲು ಕರಗುವ ದುಃಖದಲ್ಲಿ ಭಕ್ತನಾದವನು ಮುಳುಗಿ ಬೇಯುತ್ತಿರುವಾಗ; ಆ ದೇವನು ಸುಮ್ಮನೆ ಇರುವನೇ, ಭಕ್ತನ ಮನವನ್ನು ಪರೀಕ್ಷಿಸುವುದಕ್ಕೂ ಒಂದು ಮಿತಿ ಬೇಡವೆ! ಭಕ್ತನ ಸಹನೆಗೂನೊಂದು ಮಿತಿ ಇಲ್ಲವೆ! ಭಕ್ತ ವತ್ಸಲನಾದ ಆ ಭಗವಂತನೆAಬ ದರ್ಶನ ಲಾಭವನ್ನು ಇತ್ತು, ಮೈದಡಹಿ ಕಣ್ಣೀರನ್ನು, ಒರಸಿ ಸಮಾಧಾನ ಪಡಿಸುವ ಸುಂದರ ಚಿತ್ರವನ್ನು ಈ ವಚನದಲ್ಲಿ ಸಿದ್ಧರಾಮರು ಕೊಟ್ಟಿರುತ್ತಾರೆ.. ಬಹುಶಃ ತಮ್ಮ ಎಳೆಯ ವಯಸ್ಸಿನಲ್ಲಿ ತಾವು ಶ್ರೀ ಶೈಲಕ್ಕೆ ಹೋಗಿ, ಅಲ್ಲಿನ ತಮ್ಮ ನೆಚ್ಚಿನ ನಲ್ಲನಾದ

‘ಮಲ್ಲಯ್ಯ’ನನ್ನು ಹುಡುಕಾಡಿ, ಕಾಣದೆ ಕೊನೆಗೆ ಕಮರಿಯೊಂದಕ್ಕೆ ಬೀಳುವಾಗ ಆ ಮಲ್ಲಯ್ಯನು ಬಂದು ಅವರನ್ನು ಆಲಂಗಿಸಿಕೊAಡು ಮೈದಡಹಿ ಕಣ್ಣೀರೊರಸಿ, ಸಮಾಧಾನ ಪಡಿಸಿದ ಸವಿನೆನಪು ಉಂಟಾಗಿ ಈ ವಚನವನ್ನು ಹಾಡಿರಬಹುದು.

“ ನೆನಹಿನ ನಲ್ಲನೆ| ಮನೆಗೆ ಬಂದೆಡೆಯಾದಡೆ ಮನೆಯಲ್ಲಿ ಗುಡಿಗಟ್ಟುವೆ ಅಯ್ಯ!

ತೋರಣ ತೋರಣ ಮಾಮರ ಮಾಮರ ತೋರಣಂಗಟ್ಟುವೆನಯ್ಯ!

ಕಾಮಸAಗವನ್ನು ಕಳದು ನಿಃಕಾಮ ಸಂಗಕ್ಕೆಳಸುವೆ!

ಕಪಿಲಸಿದ್ಧ ಮಲ್ಲಿನಾಥನ ಕೂಡುವೆನವ್ವ!”

ತನ್ನ ನೆಚ್ಚಿನ ನಲ್ಲನು ಮನೆಗೆ ಬಂದಡೆ, ಬರುವ ಶುಭ ಸೂಚನೆ ತೋರಿದರೆ, ಭಕ್ತನಾದವನಿಗೆಅದೆಂತಹ ಸಡಗರ ಸಂಭ್ರಮ, ಅದರ ವಿಶ್ವಾಸಗಳಿಂದ, ತನ್ನಿಂದ ದೂರವಾದ ಇನಿಯನು ಮನೆಗೆ ಬರುವ ಸುದ್ಧಿ ಸಮಾಚಾರವು ತನಗೆ ತಿಳಿದು ಬಂದಾಗ ಸತಿಯಾದವಳ ಆತುರ ಕಾತುರ ಹೇಳ ತೀರದು. ವರ್ಣಿಸಲಸಾಧ್ಯ. ಹಾಗೆಯೆ ಭಕ್ತನದವನು ಲೋಕದ ಸ್ತ್ರೀÃಯಂತೆ, ಮನೆ ಮನವನ್ನು ಅಲಂಕರಿಸಿ ಭವ್ಯ ಸ್ವಾಗತ್ಕಕೆ ಸಿದ್ಧತೆಯನ್ನು ಮಾಡಿಕೊಂಡು ಅಂತರAಗದ ಪ್ರಪಂಚವನ್ನು, ಆನಂದದ ಪುಷ್ಪದ ಪರಿಮಳದಿಂದ ಅಲಂಕರಿಸಿಕೊAಡು, ಆನಂದದ ಧ್ವಜವನ್ನು ಏರಿಸಿ ಹಾರಿಸಿ ಎದುರು ನೊಡುತ್ತಾನೆ.ಬರೀಯ ನೆನಹುನಿಂದಅವನಿಗೆ ತೃಪ್ತಿಯಿಲ್ಲ. ಸಮಾಧಾನವಿಲ್ಲ ಮಾವಿನ ಮರಗಳಿಗೇ ಉದ್ದಕ್ಕೂ ಕಣ್ಣು ಸೋಲುವವರೆಗೆ ಸಾಲು ಮರಗಳ ತೋರಣ ಕಟ್ಟುವ ಕಲ್ಪನೆ ಅದ್ಭುತವಾಗಿದೆ. ಮರಗಳೇ ತೋರಣವಾಗುವ ಸುಂದರ ಕಲ್ಪನೆ ಇಲ್ಲಿ ಕಂಡು ಬರುತ್ತದೆ. ಸಾಮಾನ್ಯ ಮಾನವರ ಸ್ವಾಗತಕ್ಕೆ ಸೊಪ್ಪಿನ ತಳಿರು ತೋರಣ ಸಾಕು. ಆದರೆ ಜಗದ ನಂಟನನ್ನು, ಬಂಟನನ್ನು ಆರಾಧ್ಯ ದೈವವನ್ನು ಸ್ವಾಗತಿಸುವುದಕ್ಕೆ ಮಾವಿನ ಮರಗಳೆ ಬೇಕು ಅಲ್ಲವೆ! ಹೀಗೆ ಸಾಲು ಸಾಲು ಮಾವಿನ ವiರಗಳ ಸುಂದರಚಿತ್ರವನ್ನು ಸಿದ್ಧರಾಮೇಶ್ವರರು ಕವಿಯಾಗಿ, ಸೌಂದರ್ಯ ಆರಾಧಾಕರಾಗಿ ಕೊಟ್ಟಿರುತ್ತಾರೆ. ಪ್ರಕೃತಿಯಲ್ಲಿ ಸಿದ್ಧರಾಮರು ಪರಮಾತ್ಮನನ್ನು ಕಂಡರಿಸಿದ್ದಾರೆ.

“ಎಮ್ಮನಲ್ಲ ಎಮ್ಮ ಮನದೊಳಗೆ| ಏಕಾಂತAಬೊಕ್ಕಿಹನು ಬೇಗ ಬೇಗ

ಹೊರವಂಡಿರಣ್ಣಗಳಿರ! ನೀವಿದ್ದರೆ ಮೃತ್ಯಬಪ್ಪುದು!

ಆತ ಮನೆಯೊಳಗೆ ಮತ್ತೆ ಒಬ್ಬರನೆ ಸೈರಿಸ ಕಪಿಲಸಿದ್ಧ ಮಲ್ಲಿಕಾರ್ಜುನ!”

‘ಮನೆಯನಿಂಬು ಮಾಡು ಮದವಳಿಗೆ| ಮನವ ಶುದ್ಧವ ಮಾಡು ಮದವಳಿಗೆ,

ಮನೆಯ ಮಂಗಳವ ಮಾಡವ್ವ| ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ಗಂಡ

ಮನೆಯೊಳಯಿಕೆ ಬಂದು ಮತ್ತೊಬ್ಬರಿದ್ದಡೆ ಸೈರಿಸ!’

“ಎಲೆ ಅಯ್ಯ! ಆವ್ವನವು! ಎನಗೆ ಏರಿತ್ತಯ್ಯೋ

ಆವ್ವನಕೆ ಜಯವಚಿತನಿಲ್ಲ! ಅಯ್ಯೋ!

ಹರೆಯ ಹತ್ತಿತ್ತು ಪ್ರಾಯ| ಸಮರೂಪ ಬಂದಿತ್ತು

ಹರೆಯಕ್ಕೆ ಹರುಷಿಗನು ಇಲ್ಲ! ಅಯ್ಯ!

ಪ್ರಾಯಕ್ಕೆ ಪ್ರೌಢಿಗನು| ಕಳೆವುದಲ್ಲ|

ಜವ್ವನಿಗ ಜಯವಂತ| ಜಯವ ಮಾಡಿದಡಾನು

ಬದುಕುವೆ ಕಪಿಲಸಿದ್ಧ ಮಲ್ಲಿನಾಥ"

"ಅಯ್ಯ! ನೀನೇಕೆ ಬಾರೆ! ಒಲ್ಲೆ! ಹೇಳಯ್ಯ!

ಅಯ್ಯ! ನೀ ಬಾರಯ್ಯ! ಬಂದೆನ್ನ ಹೃದಯ ಮನಸಾಸನ

ಮಾಡಿ ನೀನು ನಿಲ್ಲಯ್ಯ! ಅಯ್ಯ! ನೀನು ಬಾರ ಬಾರ!

ನಿನ್ನ ಧರ್ಮ! ಕಪಿಲಸಿದ್ಧ ಮಲ್ಲಿಕಾರ್ಜುನ!"

ಎಂಬ ಶರಣ ಸತಿಯ ಲಿಂಗ ಪತಿಯನ್ನು ಅಂಗಲಾಚಿ ಬೇಡುವ ದೃಶ್ಯ ಮನಕರಗುವಂತಿದೆ.

"ಅಯ್ಯ! ನಿನ್ನ! ದೆಸೆದೆಸೆಗರಸುತ್ತಲಿದೇನೆ!

ಕವಿಲೆಯ ಕಂದನAತೆ ನಾನಿದ್ದೇನೆಂದು ಬಾರಾ!"

ತನ್ನ ಆರಾಧ್ಯದೈವದ ಬರವಿಗಾಗಿ ದರ್ಶನಕ್ಕಾಗಿ, ಭಕ್ತನಾದವನು ನಾನಾ ಪರಿಯಲ್ಲಿ, ಮೊರೆಯಿಡುವುದು ಸಹಜ ಪ್ರಕ್ರಿಯೆ. ಸಿದ್ಧರಾಮರು ಈ ವಚನಗಳಲ್ಲಿ_ ಅವನ ಬರವಿಗಾಗಿ ದೆಸೆ ದೆಸೆಗೆ ಹಂಬಲಿಸಿ, ತಾಯನ್ನು ಕಳೆದುಕೊಂಡ ದೂರವಾದ ಹಸುವಿನ ಕರುವಿನಂತೆ- ಕಂದನAತೆ, ಮೊರೆಯಿಟ್ಟಿದ್ದಾರೆ. ಹೃದಯಕ್ಕೆ ಮುಟ್ಟುವಂತೆ ತಟ್ಟುವಂತಿದೆ ಈ ದೃಶ್ಯ.

"ಅಯ್ಯ! ನಿನ್ನ ಬರವಿಂಗೆ! ಕಂಬೇಟAಗೊಡೆ ಅಯ್ಯ!

ಅಯ್ಯ! ನಿನ್ನ ಬರವಿಮಗೆ! ಮನದ ಮಂಚವ ಪಚ್ಚಡಿಸಿದೆ

ಎಲೆ ಅಯ್ಯ! ಅಯ್ಯ! ನಿನ್ನ ಬರವಿಂಗೆ ಚಿತ್ತ ಶುದ್ಧಿಯಾಗಿ

ಇದೇನೆ ಎಲೆ ಅಯ್ಯ! ಅಯ್ಯ! ನಿನ್ನ ಬರವಿಂಗೆ

ಜ್ಞಾನ ಸೆರಗ ಹಾಸಿ ಆಸೆಬಟ್ಟು ಇದೇನೆ ಎಲೆ ಅಯ್ಯ!

ಅಯ್ಯ! ನೀ ಬಂದು ಅವಿತಥವಿಲ್ಲದೆ ಕೂಡಿ,

ನಿನ್ನವರೊಳೋರಂತೆ ಮಾಡಾ ಗುರುವೆ!

ಕಪಿಲಸಿದ್ಧ ಮಲ್ಲಿಕಾರ್ಜುನ!"

ಅಯ್ಯ! ನಿನ್ನ ಬರವಿಂಗೆ ಎನ್ನ ಮನಮನೆಯ ಶುದ್ಧವ ಮಾಡಿ ನಿನ್ನ ಬರವನ್ನು ಕಾತರದಿಂದ ಬಿಟ್ಟ ಕಣ್ಣು ಬಿಟ್ಟ ಬಾಯಿಂದ ನೋಡುತ್ತಲಿದ್ದೇನೆ. ನನ್ನ ಹೃದಯವೆಂಬ ಹಂಸ ತೂಲಿಕಾತಲ್ಪವನ್ನು ಸಿದ್ಧಪಡಿಸಿದ್ದೇನೆ. ಮನದ ಮಂಚವ ಅಲಂಕರಿಸಿದ್ದೇನೆ. ನನ್ನ ಜ್ಞಾನದ ಸೆರಗನ್ನು ಮಡಿಯಾಗಿ ಹಾಸಿ ಎದುರುನೋಡುತ್ತಿದ್ದೇನೆ. ನೀನು ಬಂದು ನನ್ನೊಡನೆ ಎರಡಿಲ್ಲದಂತೆ ಕೂಡಿ ಸುಖ ಆನಂದವನ್ನು ನೀಡು ಎಂದು ಲಿಂಗಾಗ ಸಮರಸದ ಬಗೆಗೆ ತಮಗಿದ್ದ ಬಯಕೆಯನ್ನು ಈ ವಚನದಲ್ಲಿ ತೋಡಿಕೊಂಡಿದ್ದಾರೆ.

"ಹೊರತ ಕಣ್ಣನೆ ಮುಚ್ಚಿ ಒಳಕಣ್ಣನೆ ತೆರೆದು,

ಬಂದಾನೆAಬ ರಭಸಕ್ಕೆ ಕಿವಿಯಾಂತು ಕೇಳುತ್ತಿದ್ದೆನು!

ಅದೆತ್ತಣಿಂದ ಸುಳಿವ£ಂದರಿಯೆನಯ್ಯ!

ಸರ್ವಪ್ರತಿAಬ ಹೊಳೆದರೆ ಕಣ್ಣ ತುಂಬ ತುಂಬಿ ಹಿಡಿದೆ!

ಆ ಪ್ರತಿಬಿಂಬವಿಡಿದೆ! ಕಪಿಲಸಿದ್ಧ ಮಲ್ಲಿಕಾರ್ಜುನ ಕೂಡುವೆ,"

ಪಂಚೇAದ್ರಿಗಳಲ್ಲಿ ಬಹುಮುಖ್ಯವಾದ ಬಾಹ್ಯ ಕಣ್ಣುಗಳನ್ನು ಮುಚ್ಚಿ ಸಮಾಧಿಸ್ಥರಾಗಿ, ತಮ್ಮ ಆರಾಧ್ಯ ದೈವವು ಬಂದಾನೆAದು ಅಂತರ್ಮುಖಿಯಾಗಿ, ಜ್ಞಾನದ ಒಳಗಣ್ಣನ್ನು ತೆರೆದು; ಆತನು ಬರುವ ರಭಸಕ್ಕೆ ಮೈಯೆಲ್ಲಾ ಕಿವಿಯಾಗಿ ಆಲಿಸುತ್ತಾ, ಎಲೆ ಗಿರುಕೆಂದರೆ, ಸಾಕು, ಅತ್ತಾ ಇತ್ತ ಕಣ್ಣರಳಿಸಿ ನೊಡುತ್ತಾ, ನೋಡುತ್ತಾ, ಅದೆತ್ತಣಿಂದ ಸುಳಿವನೆಂದರಿಯದೆ, ಭ್ರಾಂತನಾಗಿ ಏಕಚಿತ್ತದಿಂದ ಮೈಯೆಲ್ಲಾ ಕಣ್ಣಾಗಿಸಿ ನೋಡುತ್ತ ಇದ್ದಾಗ, ಪುಣ್ಯವಶಾತ್, ಆ ದೈವವು ಸುಳಿದ ತಕ್ಷಣ, ಹೊಳೆದ ತಕ್ಷಣ, ಕಣ್ಣು ಹೃದಯ ಮನದ ತುಂಬ ತುಂಬಿಕೊAಡು ಅಪ್ಪಿ ಆಲಂಗಿಸಿ, ಹೃದಯದಲ್ಲಿ ಇಂಬಿಟ್ಟುಕೊಳ್ಳುವೆ, ಎಂಬ ಸುಂದರ ಚಿತ್ರವನ್ನು ಈ ವಚನದಲ್ಲಿ ಸಿದ್ಧರಾಮರು ಕೊಟ್ಟಿದ್ದಾರೆ. ಅಲ್ಲದೆ ಭಕ್ತನಾದವನು ತನ್ನ ಆರಾಧ್ಯ ದೈವದ ದರ್ಶನಕ್ಕಾಗಿ ಹಂಬಲಿಸುವ ಆತುರ ಕಾತುರವನ್ನು ಚಿತ್ರಿಸಿದ್ದಾರೆ.

ಮಾನವ ಸಹಜ ನೆಲೆಗಟ್ಟಿನಲ್ಲಿ ನಿಂತು ಸ್ತ್ರೀÃ, ಸಹಜ ಅನುಭವವನ್ನು, ದಾಖಲಿಸುವುದರಲ್ಲಿ ಸಿದ್ಧರಾಮರು ಯಶಸ್ವಿಯಾಗಿದ್ದಾರೆ. ವಚನಸಾಹಿತ್ಯದಲ್ಲಿಯೆ ಉರಿಲಿಂಗದೇವ ಮತ್ತು ಗಜೇಶ ಮಸಣಯ್ಯ ಇವರನ್ನು ಬಿಟ್ಟರೆ ಮತ್ತೆ ಇಂತಹ ಉದಾಹರಣೆ ಮತ್ತೊಂದಿಲ್ಲ. ಮನುಷ್ಯನ ಕಾಮಮೋಹಗಳ ಲೌಕಿಕ ದೈಹಿಕ ಅನುಭವಗಳನ್ನು ದೈವಿಕ ಶುದ್ಧ ಪ್ರೇಮದ ನೆಲೆಗೆ ವಿಸ್ತರಿಸಿ ತಾವು ಪುರುಷರಾಗಿಯೂ ಕೂಡ ಸ್ತ್ರೀÃಯ ಅನುಭವಗಳನನು ತಮ್ಮಲ್ಲಿ ಆರೋಪಿಸಿಕೊಂಡು ತಮ್ಮ ಅನುಭವಗಳನ್ನು ದೈವೀಕರಣಗೊಳಿಸಿರುವುದು ಒಂದು ವಿಶೇಷ.

## REFERENCES


ಶರಣಚರಿತಾಮೃತ- ಲೇ.ಸಿದ್ಧಯ್ಯ ಪುರಾಣಿಕ- ಸಪ್ನ ಬುಕ್ ಹೌಸ್-೨೦೦೬

ಸಿದ್ದರಾಮೇಶ್ವರ ವಚನ ಸಂಪುಟ-೪ - ಸಂ ಡಾ.ಎಸ್.ವಿದ್ಯಾಶಂಕರ -ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು- ೨೦೦೧

ಸೊನ್ನಲಾಪುರದ ಸಂತ ಸಿದ್ದರಾಮನ ನಿಜ ವಚನಗಳು -.ಡಾ.ಎಲ್.ಬಸವರಾಜು-ಸಾರ ಎಂಟರ್ಪ್ರೈಸಸ್ ಸುಭಾಷ್ ನಗರ ಮೈಸೂರು-೨೦೦೭

ಶಿವಶರಣರ ವಚನಗಳು - ಕ.ವಿ.ವಿ.ಧಾರವಾಡ -೧೯೭೮

ಶ್ರೀ ಸಿದ್ಧರಾಮೇಶ್ವರ ದೇವರ ಸಮಗ್ರ ವಚನಗಳು -ಚಿತ್ರದುರ್ಗ ಸಂ.ಪಿ.ಎA.ಗಿರಿರಾಜು-೨೦೦೬

ವಿಶೇಷಾನುಭವದ ಷಟಸ್ಥಲದ ವಚನಗಳು -ಕ.ವಿ.ವಿ. ಧಾರವಾಡ